ಕರ್ನಾಟಕ ಸರ್ಕಾರ

(ನೋಂದಣಿ ಮತ್ತು ಮುದ್ರಾಂಕ ಇಲಾಖೆ)

ಸಂಖ್ಯೆ: Comp/09/2003-04

ನೋಂದಣಿ ಮಹಾ ಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
8ನೇ ಮಹಡಿ, ಕಂದಾಯ ಭವನ
ಕೆಂಪೇಗೌಡ ರಸ್ತೆ, ಬೆಂಗಳೂರು-09.
ದಿನಾಂಕ:12-03-2014.

**ಸುತ್ತೋಲೆ -22**

**ವಿಷಯ:** ಕಾವೇರಿ ತತ್ರಾಂಶ ಉಪಯೋಗಿಸಲು ಸಂಕೇತ ಪದ ( Password) ವನ್ನು ಮರುಹಂಚಿಕೆ ( Reset) ಮಾಡುವ ಕುರಿತು.

********

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಡೇಟಾ ಎಂಟ್ರಿ ಆಪರೇಟರ್‌ಗಳು ಕಾವೇರಿ ತತ್ರಾಂಶ ಉಪಯೋಗಿಸಲು ಸಂಕೇತ ಪದ ( Password)ವನ್ನು ಮರುಹಂಚಿಕೆ ( Reset) ಮಾಡಲು ಒಂದು ಬಾರಿ ಮಾತ್ರ ಅನುಮತಿಸಲಾಗುವುದು. ಡೇಟಾ ಎಂಟ್ರಿ ಆಪರೇಟರ್‌ಗಳು ಸಂಕೇತ ಪದವನ್ನು ಎಚ್ಚರಿಕೆಯಿಂದ ಉಪಯೋಗಿಸತಕ್ಕದ್ದು. ಪದೇ ಪದೇ ಸಂಕೇತ ಪದವನ್ನು ಮರುಹಂಚಿಕೆ ಮಾಡಲು ಕೋರಿಕೆಯನ್ನು ಇಲಾಖೆಯು ಮಾನ್ಯ ಮಾಡುವುದಿಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಸಂಕೇತ ಪದವನ್ನು ಮರುಹಂಚಿಕೆ ಮಾಡಲು ಕೋರಿಕೆಯನ್ನು ಜಿಲ್ಲಾ ನೋಂದಣಾಧಿಕಾರಿಗಳ ಅಧಿಕೃತ ಇ-ಮೇಲ್ ಐಡಿ ಮೂಲಕ ಮಾತ್ರ ಕಳುಹಿಸಲು ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸೂಚಿಸಿದೆ. 15 ದಿನಗಳಿಗೆ ಒಮ್ಮೆ ಸಂಕೇತ ಪದವನ್ನು ಬದಲಾಯಿಸಿಕೊಳ್ಳಬಹುದು. ಈ ಬಗ್ಗೆ ಸೂಚನೆಗಳನ್ನು ಎಲ್ಲಾ ಡೇಟಾ ಎಂಟ್ರಿ ಆಪರೇಟರ್‌ಗಳಿಗೆ ನೀಡಲು ಸಹಾ ಸೂಚಿಸಿದೆ.

**ನೋಂದಣಿ ಮಹಾ ಪರಿವೀಕ್ಷಕರು ಮತ್ತು**
**ಮುದ್ರಾಂಕಗಳ ಆಯುಕ್ತರು, ಬೆಂಗಳೂರು.**

**ಪ್ರತಿ:**

1. ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಉಪ-ನೋಂದಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.